**ಓ ಎಸ್ ನಂಃ 144-14**
**ಪಿ ಡಬ್ಲ್ಯೂ ಃ 1**

**ದಿಃ 27-09-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 8 ನೇ ಪ್ರತಿವಾದಿ ಪರ ಶ್ರೀ ಡಿ ಸಿ ವಕೀಲರಿಂದ**

67. ಈ ದಾವೆಯಲ್ಲಿ 1 ನೇ ವಾದಿ ಗಂಗಾಂಬಿಕ ಆಗಿರುತ್ತಾರೆ. ನಾವಿಬ್ಬರೂ ಸೇರಿ ದಾವೆ ಹೂಡಿರುವುದು ಅಂದರೆ ಸರಿ. 1 ನೇ ವಾದಿ ಈಗ ಬೇರೆ ವಕೀಲರನ್ನು ನೇಮಕ ಮಾಡಿಕೊಂಡಿದ್ದಾರೆ ಅಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು 1 ನೇ ವಾದಿ ಪರವಾಗಿ ಪ್ರಮಾಣ ಪತ್ರಿಕೆ ಸಲ್ಲಿಸಿದ್ದೇನೆ ಎಂದು ಹೇಳಿರುವುದು ಸತ್ಯವಾಗಿದೆ. ಅವರು ನನಗೆ ಅವರ ಪರವಾಗಿ ಸಾಕ್ಷಿ ನುಡಿಯಲು ಅಧಿಕಾರ ಪತ್ರವನ್ನು ಬರೆದುಕೊಟ್ಟಿಲ್ಲ ಆದರೆ ನನಗೆ ಹೇಳಿದ್ದಾರೆ. 1 ನೇ ವಾದಿ ನನಗೆ ಅಕ್ಕ ಆಗಬೇಕು. ದಾವಾ ಸ್ವತ್ತುಗಳು ಶಿವರುದ್ರಯ್ಯರವರ ಸ್ವಯಾರ್ಜಿತ ಸ್ವತ್ತುಗಳು ಅಂದರೆ ಸರಿ.

68. ಪ್ರತಿವಾದಿ 8, 9 ಮತ್ತು 14 ರವರು ನನ್ನ ಅಕ್ಕನ ಮಕ್ಕಳು ಅಂದರೆ ಸರಿ. ವೀರಭದ್ರಯ್ಯ 3 ನೇ ಪ್ರತಿವಾದಿ ಗಂಡ ಎಂದರೆ ಸರಿ. ಅವರು ಮೃತಪಡುವ ಮುಂಚೆ ನನ್ನ ತಂದೆ 3 ನೇ ಪ್ರತಿವಾದಿ ಕಡೆಯಿಂದ ರೂ. 5 ಸಾವಿರ ಹಣ ಪಡೆದುಕೊಂಡಿದ್ದರು ಅಂದರೆ ಸರಿಯಲ್ಲ. ವಿಲ್ ನ್ನು ನನ್ನ ತಂದೆ ಬರೆದಿದ್ದರೂ ಕೂಡಾ ನಾನು ಈಗ ಬರೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆದ್ದರಿಂದ ದಾವೆಯಲ್ಲಿ ಕೇಳುವ ಪರಿಹಾರಕ್ಕೆ ನನಗೆ ಹಕ್ಕು ಇಲ್ಲ ಅಂದರೆ ಸರಿಯಲ್ಲ. ಆ ರೀತಿ ವಿಲ್ ಬರೆದಿರುವ ಸ್ವತ್ತನ್ನು ಕಬಳಿಸಲು ನಾನು ಉದ್ದೇಶಪೂರ್ವಕವಾಗಿ ಈ ದಾವೆ ಸಲ್ಲಿಸಿದ್ದು ಅಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರಿಕೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಇತರ ಪ್ರತಿವಾದಿಗಳ ಪರ ಪಾಟೀ ಸವಾಲನ್ನು ಅಂತಿಮ ಅವಕಾಶ ಎಂದು ಮುಂದೂಡಲಾಯಿತು.

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**